**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಚಿತ್ತಾಪೂರ</u>**

**<u>ಸಿ.ಸಿ.ನಂ. 158/2017</u>**

ಸರಕಾರದ ಪರವಾಗಿಃ ಕಾಳಗಿ ಪೋ.ಠಾ.,

-:ವಿರುದ್ದ:-

ಆರೋಪಿ/ತರುಃ- ಅಮೀರ್ ಶಾ

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತನ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ2: ಪ್ರಾಸಾ-2 ಡಿ.ಬಿ. ಕಟ್ಟಿಮನಿ ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿಃ 14.07.2018 ರಂದು ಈ ಪ್ರಕರಣದ ಕಡತವನ್ನು ಚಾಸ-19 ರವರಿಂದ ಪಡೆದು ಮುಂದಿನ ತನಿಖೆಯನ್ನು ಜರುಗಿಸಿರುತ್ತೇನೆಂದು, ಅದೇ ದಿನ ಚಾಸಾ-10 ಮತ್ತು ಚಾಸಾ-11 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಮಧ್ಯಾಹ್ನ 03.00 ರಿಂದ 04.00 ಗಂಟೆ ಸಮಯದಲ್ಲಿ ಜರುಗಿಸಿರುತ್ತೇನೆಂದು, ಘಟನಾ ಸ್ಥಳದಲ್ಲಿ ಅಪಘಾತಕ್ಕೀಡಾದ ಮೋಟಾರ ಸೈಕಲ್ ನಂ.ಕೆಎ-32/ಇ.ಎನ್.-2266 ನೇದ್ದನ್ನು ಚಾಸ-6 ರವರು ತೋರಿಸಿದ ಮೇರೆಗೆ ಘಟನಾ ಸ್ಥಳದಲ್ಲಿ ಅದನ್ನು ಜಪ್ತುಪಡಿಸಿಕೊಂಡು ಯಾಂತ್ರಿಕ ಪರೀಕ್ಷೆಗಾಗಿ ಚಾಸಾ-13 ರವರಿಗೆ ಕೋರಿರುತ್ತೇನೆಂದು, ಅದೇ ದಿನ ಚಾಸಾ-2 ರವರ ಮರುಹೇಳಿಕೆ ಪಡೆದಿರುತ್ತೇನೆಂದು, ಚಾಸಾ-6,15, ಮತ್ತು 16 ನೇದ್ದವರ ಹೇಳಿಕೆಗಳನ್ನು ಪಡೆದಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ3: ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿಃ 15.07.2018 ರಂದು ಚಾಸಾ-3 ರಿಂದ ಚಾಸಾ-5 ಮತ್ತು ಚಾಸಾ-17 ರವರ ಹೇಳಿಕೆಗಳನ್ನು ಪಡೆದಿರುತ್ತೇನೆಂದು, ದಿಃ 21.07.2018 ರಂದು ಚಾಸಾ-2 ರಿಂದ ಚಾಸಾ-6 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆಂದು, ಅದೇ ದಿನ ಆರೋಪಿತರ ಠಾಣೆಗೆ ಹಾಜರಾಗಿದ್ದು, ಆತನಿಗೆ

ದಸ್ತಗಿರಿ ನಿಯಮ ಪಾಲಿಸಿ ಸೂಕ್ತ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆಂದು, ದಿಃ 01.08.2018 ರಂದು ಚಾಸ-12 ರವರಿಂದ ಘಟನಾ ಸ್ಥಳದ ನಾಕಾಶೆಯನ್ನು ಪಡೆದುಕೊಂಡಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ4: ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ಅದೇ ದಿನ ಚಾಸಾ-13 ರವರಿಂದ ಐ.ಎಂ.ವಿ ವರದಿಯನ್ನು ಪಡೆದಿರುತ್ತೇನೆಂದು, ದಿಃ 04.8.2018 ರಂದು ವಾಹನದ ಮಾಲೀಕರಾದ ಚಾಸ-7 ರವರಿಗೆ ಮೋಟಾರ ಸೈಕಲ್ ನಂ.ಕೆಎ-32/ಇ.ಎನ್.-2266 ನೇದ್ದನ್ನು ಇಂಡೆಮನಿಟಿ ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೆನೆಂದು, ಅದೇ ದಿನ ಚಾಸಾ-7 ನೇದ್ದವರ ಹೇಳಿಕೆಯನ್ನು ಸಹ ಪಡೆದಿರುತ್ತೆನೆಂದು, ದಿಃ 09.08.2018 ರಂದು ಮೃತ ವ್ಯಕ್ತಿಯ ಶವ ತನಿಖಾ ವರದಿಯನ್ನು ಚಾಸಾ-14 ರವರಿಂದ ಪಡೆದಿರುತ್ತೇನೆಂದು, ತಾನು ಜರುಗಿಸಿದ ಎಲ್ಲಾ ಪಂಚನಾಮೆಗಳ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿ ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯಾ ಧಾರಗಳು ಇದ್ದ ಕಾರಣ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ-5 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-6 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿಃ 12.02.2026

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ.ಗಳು ಚಿತ್ತಾಪೂರ.**